**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.335/2022**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗೇಶ್ ಡಿ. | ಫಿಸಾ-6 |
| ತಂದೆಯ ಹೆಸರು | : ದುರ್ಗೋಜೀರಾವ್ ಬಿ. | ಚಾಸಾ-2 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಉಪವಿಭಾಗಾಧಿಕಾರಿ | ದಿನಾಂಕಃ 23.10.2025. |
| ವಾಸಸ್ಥಳ | : ಬೆಂಗಳೂರು | |

**:ಮುಖ್ಯ ವಿಚಾರಣೆ: ಪ್ರಾಭ್ಯಾ.ಸ.ಸ.ಅ. ರವರಿಂದ:**

ದಿ.16.08.2016 ರಿಂದ ದಿ.31.03.2017 ರವರೆಗೂ ಮೂಡಿಗೆರೆ ತಾಲ್ಲೂಕಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.25.03.2017 ರಂದು ನಾನು ಮೂಡಿಗೆರೆಯ ಕೊಲ್ಲಿಬೈಲ್ ಕ್ರಾಸ್ ಬಳಿ ಗಸ್ತಿನಲ್ಲಿ ಇದ್ದಾಗ ಸಂಜೆ ಸುಮಾರು 6.00 ರಿಂದ 7.00 ಗಂಟೆ ಸಮಯದಲ್ಲಿ ಸದರಿ ಸ್ಥಳದಲ್ಲಿ ಮೂರು ಲಾರಿಗಳಲ್ಲಿ ಮರಳು ತುಂಬಿಕೊಂಡು ಬರುತ್ತಿದುದ್ದನ್ನು ನೋಡಿ ಸದರಿ ವಾಹನಗಳನ್ನು ಅಡ್ಡಗಟ್ಟಿ ಪರ್ಮಿಟ್ ಇದೆಯ ಎಂದು ವಿಚಾರಿಸಿದಾಗ ಸದರಿ ಮೂರು ವಾಹನಗಳಿಗೂ ಸಹಾ ಮರಳು ಸಾಗಾಣೆ ಸಂಬಂಧ ಪರ್ಮಿಟ್ ಇರಲಿಲ್ಲ. ಸದರಿ ಮೂರು ವಾಹನಗಳ ನೋಂದಣಿ ಸಂಖ್ಯೆ KA-35-B-3786, KA-19-AA-7125 ಮತ್ತು KA-14-A-9994 ಆಗಿತ್ತು. ಈ ಸಂಬಂಧ ಸದರಿ ವಾಹನಗಳನ್ನು ಮೂಡಿಗೆರೆ ಪೋಲಿಸ್ ಉಪನಿರೀಕ್ಷಕರ ಸುಪರ್ದಿಗೆ ಸೂಕ್ತ ಆದೇಶದೊಂದಿಗೆ ನೀಡಿರುತ್ತೇನೆ. ಸಾಕ್ಷಿಯು ನಿಪಿ-3 ರಿಂದ 8 ರಲ್ಲಿ ವಾಹನಗಳನ್ನು ನೋಡಿ ಅವುಗಳನ್ನೇ ಪೋಲಿಸರ ವಶಕ್ಕೆ ನೀಡಿದ್ದಾಗಿ ಗುರುತಿಸುತ್ತಾರೆ. ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

ಸಾಕ್ಷಿಯು ದಿ.25.03.2017 ರ ಆದೇಶದ ಅಸಲು ಪ್ರತಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದ:**

ದಿ.25.03.2017 ರಂದು ಕೊಲ್ಲಿಬೈಲ್ ಕ್ರಾಸ್ ಬಳಿ ಮಾತ್ರ ಗಸ್ತು ಮಾಡಿದ್ದೆ. ಕೊಲ್ಲಿಬೈಲ್ ಕ್ರಾಸ್ ನಲ್ಲಿ ಪೋಲಿಸ್ ಚೆಕ್‌ಪೋಸ್ಟ್ ಇದೆ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ಸದರಿ ಲಾರಿಗಳ ದಾಖಲೆಗಳನ್ನು ಪರಿಶೀಲಿಸಿರಲಿಲ್ಲ. ಸದರಿ ವಾಹನಗಳಿಗೆ ಪರ್ಮಿಟ್ ಇದೆಯ ಎಂದು ನಾನು ಪರಿಶೀಲಿಸಿದ್ದೆ. ಸ್ಯಾಂಡ್ ಡಿಸ್ಟ್ರೀಬ್ಯೂಷನ್ ಕಮೀಟಿಯಲ್ಲಿ ತಹಶೀಲ್ದಾರ್ ರವರು ಸಹಾ ಸದಸ್ಯರಾಗಿರುತ್ತಾರೆ ಎಂದರೆ ಸರಿ. ಮೂಡಿಗೆರೆಯ ಕಂದಾಯ ಅಧಿಕಾರಿಗಳು ಅಕ್ರಮ ಮರಳು ಸಾಗಾಣಿಕೆಯಲ್ಲಿ ತೊಡಗಿದ್ದಾರೆ ಎಂದು 2017 ರಲ್ಲಿ ಕನ್ನಡ ದಿನಪತ್ರಿಕೆಗಳಲ್ಲಿ ಸುದ್ದಿ ಪ್ರಕಟಣೆಯಾಗಿತ್ತು ಎಂದರೆ ಸಾಕ್ಷಿಯು ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕಟಣೆಯ ಕಾರಣಕ್ಕಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ

ದಿನಾಂಕದಂದು ಮೇಲೆ ಹೇಳಿದ ಮೂರು ಲಾರಿಗಳಿಗೆ ಮರಳು ಪರ್ಮಿಟ್ ಇತ್ತು ಎಂದರೆ ಸಾಕ್ಷಿಯು ನಾನು ತಪಾಸಣೆ ಮಾಡುವಾಗ ಅಂತಹ ಪರ್ಮಿಟ್ ನ್ನು ಯಾರು ಹಾಜರುಪಡಿಸಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ವಾಹನದ ನೋಂದಣಿ ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಗಳನ್ನು ಪೋಲಿಸರು ಮಹಜರ್ ಮುಖೇನ ವಶಕ್ಕೆ ಪಡೆಯುವಾಗ ನಾನು ಹಾಜರಿರಲಿಲ್ಲ. ನಾನು ಹೇಳಿದಂತೆ ಯಾವುದೇ ವಾಹನಗಳನ್ನು ತಪಾಸಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-11 ನ್ನು ಪೋಲಿಸರಿಗೆ ಕೊಟ್ಟಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಮ್ಮ ಇಲಾಖೆಯಲ್ಲಿ ಆದ ದೋಷವನ್ನು ಮುಚ್ಚಿಹಾಕಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.